## ಸ್ಮೈಲ್ ಪ್ಲೀಸ್




ಭಟ್ಟರ ಸಂದರ್ಶನ ಹಾಗೂ ಅವರ ಮನದಾಳದ ಮಾತುಗಳು, ಅವರ ದಿಢೀರ್ ರಾಜಕೀಯ ಪ್ರವೇಶ ಅಭಿಮಾನಿಗಳಿಗೆ ಆಶ್ಚರ್ಯವನ್ನು ಉಂಟುಮಾಡಬಹುದು. ಆದರೆ ಅವರಂಥವರ ಪ್ರವೇಶ, ಕುಲಗೆಟ್ಟು ನಾರುತ್ತಿರುವ ಈ ಪರಿಸ್ಥಿಯಲ್ಲಿ ಅವಶ್ಯ. ಮತದಾರ ಪ್ರಭುಗಳು ಇಂಥ ಅಭ್ಯರ್ಥಿಗಳನ್ನು ಒಂದು ಬಾರಿ ಗೆಲ್ಲಿಸೋ ಮನಸ್ಸು ಮಾಡಬೇಕಷ್ಟೆ.

—ಎಸ್.ಪ್ರಭಾ, ಬೆಂಗಳೂರು

ಗಾಂಧಿನಗರದಿಂದ ಪಾರ್ಲಿಮೆಂಟಿಗೆ ಹೊರಟ ಭಟ್ಟರ ಸಂವಾದ ಓದಿ ನನಗೆ ಅತ್ಯಾಶ್ಚರ್ಯವಾಯ್ತು! ಇದು ಮೂರ್ಖರ ದಿನದ ಲಹರಿಯೋ ಎಂಬ ಅನುಮಾನವಂತೂ ಇದೆ. ಭಟ್ಟರಿಗೆ ಯಾಕೆ ಪಾಪದ ರಾಜಕೀಯ ಬೇಕಿತ್ತು ಅಂತಲೂ ಅನಿಸಿದೆ.

ಸೋಷಿಯಲಿಸ್ಟ್, ಫ್ಯಾಸಿಸಂ ಹೀಗೆ ಯಾವ ತತ್ವದ ಮೇಲೆ ನಂಬಿಕೆಯಿಟ್ಟು ರಾಜಕೀಯಕ್ಕೆ ಹೊರಟಿದ್ದಾರೋ ಭಟ್ಟರು? ಅವರು ಮಾಡುತ್ತಿದ್ದ ಸಿನಿಮಾ ಅಡುಗೆ ಘಮಘಮವಾಗಿರುತ್ತಿತ್ತು. ಈಗ ರಾಜಕೀಯ ಪಡಸಾಲೆಗೆ ಹೊರಟಿರುವ ಅವರು ವಾಂತಿ ಮಾಡಿಕೊಳ್ಳುವುದು ಗ್ಯಾರಂಟಿ! ನಿರ್ದೇಶಕ ಸೂರಿ ಅವರ ಮಾತುಗಳು ಮಾರ್ಮಿಕವಾಗಿವೆ.

— ಎಚ್. ಆನಂದಕುಮಾರ್, ಚಿತ್ರದುರ್ಗ

ಹಾಸ್ಯ ಸಂಚಿಕೆಯಲ್ಲಿನ ಭಟ್ಟರ ಸಂದರ್ಶನ, ದರ್ಶನ್, ಸುದೀಪ್ ಮತ್ತು ಪುನೀತ್ ಸೇರಿಕೊಂಡು ಧಾರಾವಾಹಿ ಮಾಡುತ್ತಿರುವ ಸುದ್ದಿ, ಹರಿಪ್ರಿಯಾ ಕಿಡ್ನಾಪ್ ಈ ಸುದ್ದಿಗಳನ್ನು ನಿಜ ಎಂದುಕೊಂಡೇ ಓದಿಕೊಂಡು ಹೋದೆ. ತುಂಬ ಅಚ್ಚರಿಯಾಯ್ತು. ಇಷ್ಟು ದೊಡ್ಡ ಸುದ್ದಿ ಟೀವಿ ಚಾನಲ್‌ಗಳಲ್ಲಿಯೂ ನೋಡಿಲ್ಲವಲ್ಲ ಎಂಬ ಅನುಮಾನ ಮೂಡಿತು. ಕೊನೆಯ ಪುಟಲ್ಲಿ ಅವು ನಗೆ ಸಂಚಿಕೆಯ ಕಾಲ್ಪನಿಕ ರಚನೆಗಳು ಎಂದು ತಿಳಿದು ಬೆಸ್ತು ಬಿದ್ದೆ. ಕಾಲ್ಪನಿಕ ರಚನೆಗಳಾದರೂ ಮೂರೂ ಲೇಖನಗಳು ತುಂಬ ಸ್ವಾರಸ್ಯಕರವಾಗಿ ಓದಿಸಿಕೊಂಡು ಹೋದವು. ಏಪ್ರಿಲ್ ಒಂದರ ನಗೆದಿನವನ್ನು ಒಂದು ವಾರ ಮುಂಚೆಯೇ ಆಚರಿಸಿದ ಖುಷಿ ನನ್ನದಾಯ್ತು.

—ದೀನಾನಾಥ ಎಂ.ಜಿ. ಧಾರವಾಡ

ಪ್ರವೀಣ ಕುಲಕರ್ಣಿ ಅವರು ಬರೆದ 'ಚೌಕಿದಾರರ ಚೌಕಿಯಲ್ಲಿ' ನಗೆಲೇಖನ ತುಂಬ ಖುಷಿಕೊಟ್ಟಿತು. ಮೋದಿ, ರಾಹುಲ್ ಮತ್ತು ದೇವೇಗೌಡ ಮೂವರನ್ನೂ ಕಾಲೆಳೆದಿರುವ ಲೇಖಕರು ಚುನಾವಣೆಯ ಗಂಭೀರ ಆರೋಪ ಪ್ರತ್ಯಾರೋಪಗಳ ಸುರಿಮಳೆಗಳ ನಡುವೆಯೂ ನಗೆಯ ಚಿಗುರು ಮೂಡಿಸಿದ್ದಾರೆ.

— ಶ್ವೇತಾ ತೇರದಾಳ, ಹಾವೇರಿ.

ಹಾಸ್ಯಸಂಚಿಕೆಯ ನಮ್ಮ ಮನೆಯಲ್ಲಿ ನಗೆಯ ಹೊನಲನ್ನೇ ಹರಿಸಿತು. ಮನೆಯ ಎಲ್ಲರೂ ಓದಿ ಖುಷಿಪಟ್ಟರು. ಅದರಲ್ಲಿಯೂ ಯೋಗರಾಜ ಭಟ್ ಚುನಾವಣೆಗೆ ನಿಲ್ಲುವುದಕ್ಕೆ ನಿರ್ದೇಶಕ ಸೂರಿ ಅವರ ಪ್ರತಿಕ್ರಿಯೆ ಮತ್ತು 'ಗೌರವ ಡಾಕ್ಟರೇಟ್ ವಿಜೇತ' ಕೆ. ಮಂಜು ಪ್ರತಿಕ್ರಿಯೆಗಳು ಮಜವಾಗಿದ್ದವು. ಕಿರುತೆರೆಯಲ್ಲಿ ಮೂವರು ಸ್ಟಾರ್‌ಗಳು ಸೇರಿಕೊಂಡು ಧಾರಾವಾಹಿ ಮಾಡುತ್ತಿರುವುದು ಕಾಲ್ಪನಿಕ ಬರಹವೇ ಇರಬಹುದು. ಆದರೆ ಅದು ಸತ್ಯವಾಗಲಿ ಎಂದು ಮನಸ್ಸು ಹಾರೈಸಿತು. ಯಾಕೆಂದರೆ ಚಿತ್ರಮಂದಿರಗಳಲ್ಲಿ ಒಂದರ ಹಿಂದೊಂದರಂತೆ ಕೆಟ್ಟ ಸಿನಿಮಾಗಳನ್ನು ಕೊಡುತ್ತಿರುವ ಸ್ಟಾರ್‌ಗಳು ಕಿರುತೆರೆಯಲ್ಲಾದರೂ ಒಳ್ಳೆಯ ಮನರಂಜನೆ ಕೊಡಲಿ.

—ತೇಜಸ್ವಿನಿ ರಾಮ್‌ಪ್ರಸಾದ್, ಕುಮಟಾ

### ಹುಳಿ ಸಿಹಿ ರುಚಿಯ ಸ್ಟಾರ್ ಫ್ರೂಟ್

ಗೀತಾ ಕುಂದಾಪುರ ಅವರ ಚಿತ್ರಲೇಖನದಲ್ಲಿ ಮಾಹಿತಿ ಪೂರ್ಣವಾಗಿದೆಯಾದರೂ ಆ ಹಣ್ಣಿಗಿರುವ ಕನ್ನಡದ ಹೆಸರನ್ನು ಲೇಖಕಿಯವರು ಬರೆದಿಲ್ಲ? ಅವರಿಗದು ಗೊತ್ತಿರಲಿಲ್ಲವೇ? ಆ ಹಣ್ಣಿಗೆ ಕಮರದ್ರಾಕ್ಷಿ ಅಥವಾ ಕಮರಾಕ್ಷಿ ಎಂದೂ ಕರೆಯುತ್ತಾರೆ.

— ಕೊ.ಸು .ನರಸಿಂಹ ಮೂರ್ತಿ, ಮೈಸೂರು

### ಕಟ್ಟಡದ ಹೆಸರಿನಲ್ಲಿ ಮೌಲ್ಯಗಳ ಕುಸಿತ

'ನಿಮ್ಮೊಡನೆ'ಯಲ್ಲಿ ರಘುನಾಥ ಚ. ಹ. ಬರೆದಿರುವ ಲೇಖನ ಸಕಾಲಿಕವಾಗಿದೆ. ತಮ್ಮ ಜವಾಬ್ದಾರಿಯನ್ನು ಸಮರ್ಥ ರೀತಿಯಲ್ಲಿ ನಿಭಾಯಿಸದವರಿಂದ ಮತ್ತು ಭ್ರಷ್ಟ ವ್ಯವಸ್ಥೆಯಿಂದ ಇಂಥ ದುರಂತಗಳು ಘಟಿಸುತ್ತವೆ. ಇದರಲ್ಲಿ ಆಗುವ ಅನಾಹುತ, ಅಮಾಯಕರ ಸಾವು ನೋವು ಇತ್ಯಾದಿಗಳಿಗೆ ಅವರೇ ಕಾರಣರಾಗುತ್ತಾರೆ. ಅಂಥವರು ಆತ್ಮವಿಮರ್ಶೆ ಮಾಡಿಕೊಳ್ಳುವುದು ಒಳ್ಳೆಯದು.

—ನಾ.ಕು. ಗಣೇಶ್, ಬೆಂಗಳೂರು

### ಮನೀಷ್ ಪಡೆಗೆ ಚುಟುಕು ಗುಟುಕು

ಭಾರತ ಕ್ರಿಕೆಟ್ ತಂಡಕ್ಕೆ ಕರ್ನಾಟಕದ ಕೊಡುಗೆ ಸಾಕಷ್ಟಿದೆ. ಒಂದೊಮ್ಮೆ ಭಾರತ ಕ್ರಿಕೆಟ್ ತಂಡದ ಅರ್ಧದಷ್ಟು ಜನರು ಕರ್ನಾಟಕದವರಾಗಿದ್ದರು. ಈಗ ಭಾರತ ಕ್ರಿಕೆಟ್ ತಂಡದಲ್ಲಿ ಕನ್ನಡದವರ ಸಂಖ್ಯೆ ಕುಗ್ಗಿದೆ. ಆದರೆ ಕೆ.ಎಲ್. ರಾಹುಲ್ ಅವರಂಥವರ ಕುರಿತು ನಿರೀಕ್ಷೆಯೂ ಇದೆ. ಕರ್ನಾಟಕ ರಣಜಿ ತಂಡ ಈಗಲೂ ಸಶಕ್ತವಾಗಿದೆ ಎಂಬುದಕ್ಕೆ ಇತ್ತೀಚೆಗೆ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯನ್ನು ಮುಡಿಗೇರಿಸಿಕೊಂಡಿದ್ದೇ ಸಾಕ್ಷಿ. ಈ ಕುರಿತು ಬೆಳಕು ಚೆಲ್ಲಿದ ನರೇಂದ್ರ ಗಂಗೊಳ್ಳಿ ಲೇಖನ ಕುತೂಹಲಕಾರಿಯಾಗಿದೆ.

— ಶಶಿಕಲಾ ರಂಗನಾಥ್, ಚಾಮರಾಜಪೇಟೆ

### ಆನೆಕೆರೆ ಬಸದಿ



ಪ್ರಸಾದ್ ಶೆಣೈ ಆರ್.ಕೆ. ಬರೆದಿರುವ 'ಆನೆಕೆರೆ ಬಸದಿ' ಕಥೆ ಇಷ್ಟವಾಯಿತು. ಅವರ ಭಾಷೆ, ವಿವರಗಳನ್ನು ಕಟ್ಟಿಕೊಡುವ ರೀತಿ ಚೆನ್ನಾಗಿದೆ. ಆದರೆ ಒಂದು ಕಥೆ ಇಷ್ಟರಿಂದಲೇ ಸಫಲವಾಗುವುದಿಲ್ಲ. ಅದಕ್ಕೆ ಘಟನೆಯನ್ನು ಒಂದು ಅನುಭವವಾಗಿ ದಾಟಿಸುವ ಮತ್ತು ಆ ದಾಟುವಿಕೆಯಲ್ಲಿಯೇ ಹೊಸದೊಂದು ಜೀವನದರ್ಶನ ಹೊಳೆಯಿಸುವ ಶಕ್ತಿ ಇರಬೇಕಾಗುತ್ತದೆ. ಆ ದಾರಿಯಲ್ಲಿ ಈ ಕಥೆಗಾರರು ಇನ್ನಷ್ಟು ದೂರ ಸಾಗಬೇಕಾಗಿದೆ. ಸತತ ಅಧ್ಯಯನ ಮತ್ತು ಬದುಕನ್ನು ಇನ್ನಷ್ಟು ಗಾಢವಾಗಿ ಪರಿಭಾವಿಸುವ ಪ್ರಯತ್ನದಿಂದ ಅವರು ಇನ್ನಷ್ಟು ಒಳ್ಳೆಯ ಕಥೆಗಳನ್ನು ಬರೆಯಲು ಸಾಧ್ಯ.

—ದೇವರಾಜ ರೆಡ್ಡಿ, ಕೋಲಾರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in